# ಷೇರುಪೇಟೇಲಿ ವಿಂಡೊ ಶಾಪಿಂಗ್

ಷೇರುಪೇಟೆ ಎನ್ನುವುದು ಸಿನಿಮಾ ಉದ್ಯಮ ಇದ್ದಂತೆ. ಸಿನಿಮಾ ಮಾಡಿ ಕುಬೇರರಾಗಿರುವಂತೆಯೇ, ಎಲ್ಲವನ್ನೂ ಕಳೆದುಕೊಂಡವರೂ ಇದ್ದಾರೆ. ಈ ಏರಿಳಿತ ಷೇರುಪೇಟೆಯಲ್ಲಿಯೂ ಇದೆ. ಹಣ ಹೂಡಿ ಲಾಭ ಮಾಡಿಕೊಂಡವರ ಬಗೆಗಿನ ಬಣ್ಣಬಣ್ಣದ ಕಥೆಗಳಂತೆ, ಹಣ ಕಳೆದುಕೊಂಡು ಷೇರುಪೇಟೆಗೆ ಬೆನ್ನು ಮಾಡಿದವರು ಹೇಳಿಕೊಳ್ಳುವ ಅನುಭವಗಳೂ ಸಾಕಷ್ಟಿವೆ. ಕೊರೊನಾ ಕಾಲಘಟ್ಟದಲ್ಲಿ ಷೇರುಪೇಟೆಯಲ್ಲಿ ಅನಿರೀಕ್ಷಿತ ಹುಮ್ಮಸ್ಸು ಕಾಣಿಸಿಕೊಂಡಿದೆ. ಗೂಳಿ–ಕರಡಿಯ ಅಂಗಳದಲ್ಲಿ ಹೊಸಮುಖಗಳು ದೊಡ್ಡ ಸಂಖ್ಯೆಯಲ್ಲಿ ಕಾಣಿಸಿಕೊಂಡಿವೆ. ಆದರೆ, ಷೇರುಪೇಟೆಯಲ್ಲಿ ಉತ್ಸಾಹದ ಜೊತೆಗೆ ಸಿದ್ಧತೆ, ಅನುಭವ, ಶಿಸ್ತು, ಸಂಯಮಕ್ಕೆ ಹೆಚ್ಚಿನ ಬೆಲೆ. ವಹಿವಾಟಿನಲ್ಲಿ ಸಾವಧಾನ ಹೊಂದಿರುವವರಷ್ಟೇ ಷೇರುಪೇಟೆಯ ಸುದೀರ್ಘ ಪಯಣದಲ್ಲಿ ಉಳಿಯಬಲ್ಲರು, ಲಾಭ ಮಾಡಿಕೊಳ್ಳಬಲ್ಲರು. ಸರಕುಗಳನ್ನು ಕೊಳ್ಳುವುದಕ್ಕಿಂತಲೂ ಮಾರುಕಟ್ಟೆಯ ಸಂಭ್ರಮ ಹೇಗಿದೆ ಎನ್ನುವುದರ ಅನುಭವವನ್ನು ಸವಿಯುವುದಕ್ಕಾಗಿಯೇ ಪೇಟೆಗೆ ಬರುವುದನ್ನು ‘ವಿಂಡೊ ಶಾಪಿಂಗ್’ ಎನ್ನುತ್ತೇವೆ. ಷೇರುಪೇಟೆಯ ಈ ವಿಂಡೊ ಶಾಪಿಂಗ್, ಷೇರು ವಹಿವಾಟಿನಲ್ಲಿ ಆಸಕ್ತಿಯುಳ್ಳವರು ಬೆಳೆಸಿಕೊಳ್ಳಬೇಕಾದ ಸ್ವಭಾವ, ರೂಢಿಸಿಕೊಳ್ಳಬೇಕಾದ ಹವ್ಯಾಸಗಳ ಜೊತೆಗೆ ಬಿಡಲೇಬೇಕಾದ ದೌರ್ಬಲ್ಯಗಳ ಬಗ್ಗೆ ಗಮನಸೆಳೆಯುತ್ತದೆ.

■ ಡಿ.ಎಂ. ಘನಶ್ಯಾಮ